<u>ದಿನಾಂಕಃ **26.11.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**.**</u>

<u>ಮುಂದುವರಿದ ಪಾಟೀಸವಾಲುಃ ಶ್ರೀಮತಿ ಪಿ ಎಸ್ ಯು ವಕೀಲರಿಂದ ಶ್ರೀ ಪಿ ಕೆ ಬಿ **3** ನೇ ಎದುರುದಾರರ ಪರವಾಗಿ**.**</u>

ದಿನಾಂಕ 15.11.2022 ರಂದು ಕೆಂಪಪುರದಿಂದ ವರ್ತೂರ್ ಗೆ ಹೋಗುತ್ತಿದ್ದೆನು. ವಾಹನ ಸಂಖ್ಯೆ ಕೆಎ-03/ಕೆಹೆಚ್-1511 ಇದು ನನ್ನ ವಾಹನ, ಇದು ಗೋ ಡಿಜಿಟ್ ಕಂಪನಿಯಲ್ಲಿ ವಿಮೆ ಹೊಂದಿತ್ತು. ಸದರಿ ವಿಮೆ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಮೋಟಾರ್ ಸೈಕಲ್ ಮೇಲೆ ನಾನು ಒಬ್ಬನೇ ಹೋಗುತ್ತಿದ್ದೆನು. ನನಗೆ ಬುಲೆಟ್ ಮೋಟಾರ್ ಸೈಕಲ್ ಸಂಖ್ಯೆ ಟಿಎನ್ ರಾಜ್ಯದ ಸಿಕ್ಯೂ-8503 ಬಂದು ಡಿಕ್ಕಿ ಹೊಡೆಯಿತು. ಸದರಿ ಮೋಟಾರ್ ಸೈಕಲ್ ನನ್ನ ಎದುರಿನಿಂದ ಬಂದಿತು. ಫಿರ್ಯಾದಿ ನಾನೇ ಕೊಟ್ಟಿದ್ದೇನೆ ಎಂದರೆ ಸರಿ. ಫಿರ್ಯಾದಿಯಲ್ಲಿ ಅಪಘಾತವಾದ ರೀತಿಯನ್ನು ಬರೆಸಿದ್ದೇನೆ ಎಂದರೆ ಸರಿ. ಬುಲೆಟ್ ಮೋಟಾರ್ ಸೈಕಲ್ ನನ್ನ ಹಿಂದಿನಿಂದ ಬಂದು ಓವರ್ ಟೇಕ್ ಮಾಡುವಾಗ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಇರುವ ಸಹಿ ನನ್ನದೇ ಎಂದರೆ ಸರಿ. ಸದರಿ ಮೋಟಾರ್ ಸೈಕಲ್ ಅನ್ನು ಸುಮಾರು 30 ಅಡಿ ದೂರದಿಂದ ನೋಡಿದೆನು. ಸದರಿ ಮೋಟಾರ್ ಸೈಕಲ್ ಅನ್ನು ಓಡಿಸುತ್ತಿದ್ದ ನವನೀತ್ ಕೃಷ್ಣನ್ ಗೆ ಸಹ ಗಾಯಗಳಾಗಿದ್ದವು ಎಂದರೆ ಸರಿ.

ನನ್ನ ಎಂ ಎಲ್ ಸಿ ದಾಖಲಾತಿಗಳನ್ನು ನೋಡಿದರೆ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದು ಕಂಡುಬರುತ್ತದೆ ಎಂದರೆ ಸರಿಯಲ್ಲ. ನಾನು ಹೆಲ್ಮೆಟ್ ದರಿಸಿರಲಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕರು ನನ್ನನ್ನು ಸುರಕ್ಷ ಆಸ್ಪತ್ರೆಗೆ ಸೇರಿಸಿದರು. ಸದರಿ ಆಸ್ಪತ್ರೆಯಲ್ಲಿ 3 ದಿನ ಇದ್ದೆನು. ನಾನು ಮೋಟಾರ್ ಸೈಕಲ್ ಮೇಲಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದು ಎಂ ಎಲ್ ಸಿ ವರದಿಗಳಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ನನ್ನ ಬಲ ಕಾಲಿನ ಕಿರುಬೆರಳಿಗೆ ಮತ್ತು ತಲೆಗೆ ಶಸ್ತ್ರ ಚಿಕಿತ್ಸೆ ಆಗಿದೆ. ನನಗೆ ತಲೆಗೆ ಶಸ್ತ್ರಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಹೆಲ್ಮೆಟ್ ಹಾಕಿದ್ದರೆ ತಲೆಗೆ ಗಾಯವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.14 ಇನ್ವಾಯ್ಸ್‌ಗಳಿಗೆ ಬಿಲ್ಲಿನ ರಶೀದಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದೇ ಬಿಲ್ಲು ಎನ್ನುತ್ತಾರೆ. ನಿಪಿ.14 ಬಿಲ್ಲಿಗೆ ರಶೀದಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೂಲ ಬಿಲ್ಲು ಮತ್ತು ರಶೀದಿಯನ್ನು ಗೋ ಡಿಜಿಟಲ್ ವಿಮೆ ಕಂಪನಿಯಲ್ಲಿ ಹಾಜರುಪಡಿಸಿ ಸದರಿ ಹಣವನ್ನು ಮರುಪಾವತಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.14 ರಲ್ಲಿ ಗಾಡಿ ಮೆಕಾನಿಕ್ ರವರ ಸಹಿ ಇಲ್ಲ

ಎಂದರೆ ಸರಿ. ನಾನು ಬಿಲ್ಲು ಮರುಪಾವತಿಯನ್ನು ಗೋ ಡಿಜಿಟಲ್ ವಿಮೆ ಕಂಪನಿಯಲ್ಲಿ ಪಡೆದಿಲ್ಲ ಎಂದು ದಾಖಲಾತಿ ಹಾಜರುಪಡಿಸುತ್ತೇನೆ. ನಿಪಿ.15 ಕ್ಕೆ ಆಸ್ಪತ್ರೆಯವರ ಮುದ್ರೆ ಇಲ್ಲ ಎಂದರೆ ಸರಿ. ನಿಪಿ.15 ರಲ್ಲಿ ಮುಂಗಡ ಹಣ ಪಾವತಿ ಮಾಡಿದ ಬಗ್ಗೆ ನಮೂದು ಇಲ್ಲ ಮತ್ತು ಕೈ ಬರಹದಿಂದ ಬರೆದ ಬಗ್ಗೆ ಯಾವುದೇ ವಿವರಣೆ ಇಲ್ಲ ಎಂದರೆ ಸರಿಯಲ್ಲ. ಮುಂಗಡ ಹಣ ಪಾವತಿ ಮಾಡಿದ ಬಗ್ಗೆ ಯಾವುದೇ ರಶೀದಿಗಳನ್ನು ಹಾಜರುಮಾಡಿಲ್ಲ ಎಂದರೆ ಸರಿ. ನಿಪಿ.15 ನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.15 ರಲ್ಲಿ ಕ್ರಮಸಂಖ್ಯೆ 2 ರಿಂದ 13 ಗಳು ಅಪಘಾತದಲ್ಲಿ ಆದ ಗಾಯಗಳಿಗೆ ಸಂಬಂಧಿಸಿದ ಔಷದಿಯ ಬಿಲ್ಲುಗಳು ಅಲ್ಲ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ನನಗೆ ಕೇವಲ ಬಲಗಾಲಿನ ಕಿರುಬೆರಳಿಗೆ ಮಾತ್ರ ಗಾಯವಾಗಿತ್ತು ಎಂದರೆ ಸರಿಯಲ್ಲ. ಆಸ್ಪತ್ರೆಯ ದಾಖಲಾತಿಗಳ ಪ್ರಕಾರ ನನಗೆ ಯಾವುದೇ ಒಳಜೋಡಣೆಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಈಗ ನಾನು ಸಂಪೂರ್ಣ ಗುಣಮುಖವಾಗಿದ್ದು, ಚೆನ್ನಾಗಿ ಓಡಾಡುತ್ತೇನೆ ಎಂದರೆ ಸರಿಯಲ್ಲ.

ನಾನು ಅಪಘಾತಕ್ಕಿಂತ ಮುಂಚೆ ಎ ಎಸ್ ಟೈರ್ ಪ್ಯಾಲೇಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ತಿಂಗಳಿಗೆ ರೂ.25,000/- ಸಂಬಳ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಎದುರು ಬರುತ್ತಿದ್ದ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿ ನನ್ನ ತಪ್ಪಿನಿಂದ ಅಪಘಾತ ಪಡಿಸಿ ಗಾಯ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.18 ರ ಪ್ರಕಾರ ನಾನೇ ಅಪಘಾತ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**).**

ಓ ಹೇ ಕೇ ಸ ಇದೆ**.**

**15** ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಬೆಂಗಳೂರು**.**